**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು
**LAC.No. 45/2018**

ಪಿ**.**ಡಬ್ಲ್ಯೂ**. 1**

ದಿನಾಂಕಃ **28.01.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರಿದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ**.** ಎಂ**.**ಎಲ್**.**ಪಿ**.** ವಕೀಲರಿಂದ

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು ನಿಶಾನೆಗಳಾಗಿ ಗುರುತಿಸಲಾಯಿತು**.**

| | |
|---|---|
| ನಿ.ಪಿ.16 | ದಿ.06.09.2017 ರಂದು ಕಲಂ.64 ಕಾಯ್ದೆ 2013 ರ ಅಡಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಮುಂದೆ ಅರ್ಜಿದಾರರು ಸಲ್ಲಿಸಿದ ಅರ್ಜಿ |
| ನಿ.ಪಿ.17 | ವಿಶೇಷ ಭೂ ಸ್ವಾಧೀನಾಧಿಕಾರಿಗಳು ಅರ್ಜಿ ಸ್ವೀಕರಿಸಿದ ದಿನಾಂಕ 06.09.2017 ರ ಮೊಹರು ಇರುವ ಇಂಡೆಕ್ಸ್ ಫಾರಂ. |

ಪಾಟೀ ಸವಾಲು ಃ **1** ನೇ ಎದುರುದಾರರ ಪರವಾಗಿ ಶ್ರೀ**.** ಡಿಜಿಪಿ ವಕೀಲರಿಂದ

ನಿ.ಪಿ.16 ನ್ನು ನಾನು 1 ನೇ ಎದುರುದಾರರ ಕಚೇರಿಯಲ್ಲಿ ಕಾಲಮಿತಿಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕಾಲಮಿತಿಯಲ್ಲಿ ಅರ್ಜಿ ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

2. ಭೂ ಸ್ವಾಧೀನಾಧಿಕಾರಿಗಳು ನನಗೆ ನೋಟೀಸ್ ಜಾರಿ ಮಾಡಿದ್ದರು. ನಾನು ನೋಟೀಸ್ ಸ್ವೀಕರಿಸಿದ ದಿನಾಂಕ ನೆನಪಿಲ್ಲ. ಎದುರುದಾರರು ಸೂಕ್ತ ಮತ್ತು ವೈಜ್ಞಾನಿಕ ಪರಿಹಾರವನ್ನು ಪಾವತಿಸಿದ್ದರೂ ನಾನು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಗಧಿತ ಕಾಲಾವಾಧಿಯಲ್ಲಿ ಅರ್ಜಿ ಸಲ್ಲಿಸದೇ ಇರುವುದರಿಂದ ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹ n ಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು